ಎಂದು ಹೇಳಲಿಲ್ಲ. ಆ ಕಡತಗಳನ್ನೆಲ್ಲಾ place it on the Table of the House ಎಂದು ಹೇಳಿದೆ.

Mr. Speaker : This itself is sufficient. They will take note of it.

ಖಾಸಗಿ ಕಾರ್ಯಕಲಾಪ

ಸಂಪೂರ್ಣ ಪಾನ ನಿರೋಧ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್ ನಗರ) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ"

(ಪ್ರಸ್ತಾವ ಮಾಡಿಸಲ್ಪಟ್ಟಿತು)

ಶ್ರೀ ವಾಟಾಳ್ ನಾಗರಾಜ್ : ಈ ನಿರ್ಣಯವನ್ನು ಮಂಡಿಸತಕ್ಕಂಥ ಒಂದು ಪರಮ ಪವಿತ್ರವಾದ ಅವಕಾಶ ನನಗೆ ಹೊರೆತಿರುವುದಕ್ಕಾಗಿ ನಾನು ಬಹಳ ಸಂತೋಷ ಪಡುತ್ತಿದ್ದೇನೆ. ಹಾಗೂ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈಗ ಬಹಳ ಜನ ಊಟ ಮಾಡದೇ ಇರುವುದರಿಂದ ಬಹಳ ಜನ ಸದಸ್ಯರು ಇದರ ಬಗ್ಗೆ ಅಷ್ಟಾಗಿ ಗಮನಹರಿಸಲು ಸಾಧ್ಯವಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲಿ ಪಟೇಲರು ಭಾಗವಹಿಸಬೇಕಾಗುತ್ತದೆ. ಹಾಗೂ ಮಾನ್ಯ ಮಿತ್ರರಾದ ಶ್ರೀ ನಾಣಯ್ಯನವರೂ ಮಾತನಾಡಬೇಕಾಗುತ್ತದೆ....

ಶ್ರೀ ಜೆ.ಹೆಚ್. ಪಟೇಲ್ : ಇದರ ಬಗ್ಗೆ ಏನೂ ಗೊತ್ತಿಲ್ಲದೇ ಇರುವ ನೀವೇ ರೆಸಲೂಷನ್ ತಂದಾಗ, ಸ್ವಲ್ಪ ಗೊತ್ತಿರುವ ನಾನು ಮಾತನಾಡದೆ ಇರಲು ಆಗುತ್ತದೆಯೇ? ಹಿಂದಿನ ವಿಧಾನ ಸಭೆಯಲ್ಲಿ ಸದಸ್ಯರು ಆಗಿದ್ದ, ಶ್ರೀ ಕೆ.ಹೆಚ್. ಶ್ರೀನಿವಾಸ್ರವರು ಇದೇ ನಿರ್ಣಯವನ್ನು ಚರ್ಚೆಗೆ ತಂದು ಆಗ ನಿರ್ಣಯವಾಗಿರತಕ್ಕಂಥದ್ದು ತಾವು ಗಮನಿಸಬೇಕು. ಮಾನ್ಯ ಸದಸ್ಯರು ಅವರ ವಿಚಾರಗಳನ್ನು ಇಡಲಿ. ಆದರೆ ಇವೊತ್ತು ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗಾಗಲೇ ಈ ನಿರ್ಣಯ ಮಂಡಿಸಿದ್ದೇನೆ. ಇದರ ಬಗ್ಗೆ ಚರ್ಚೆಯನ್ನು ನಾನು ಈಗಾಗಲೇ ಪ್ರಾರಂಭ ಮಾಡಿದ್ದೇನೆ. ಮುಂದೆ ಇದನ್ನು ಯಾವತ್ತು ಇಟ್ಟುಕೊಳ್ಳೋಣ ಎಂದು ನಿರ್ಧರಿಸುವುದು ತಮಗೆ ಬಿಟ್ಟಿದ್ದುದು.

ಶ್ರೀ ಎಂ.ಸಿ. ನಾಣಯ್ಯ : ಇದರ ಬಗ್ಗೆ ಚರ್ಚೆಯನ್ನು ರಾತ್ರಿ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಹಾಗೆಂದರೇನು? ಪ್ರಕಾಶ್ರವರ ಬಗ್ಗೆ ನನಗೆ ನಂಬಿಕೆ ಇತ್ತು. ಆದರೆ ಇವೊತ್ತು ಯಾರೂ ಇರುವುದಿಲ್ಲ ಎನ್ನುತ್ತಿದ್ದಾರೆ; ಏನಿದು? ಪಟೇಲರ ವಿಚಾರ ಬೇರೆ ಅವರು ಹೇಳಿದರೆ ಅದು ಸರಿಯಾಗಿ ಇರುತ್ತಿತ್ತು.

ಶ್ರೀ ಎಂ.ಪಿ. ಪ್ರಕಾಶ್ : ಎಂಟು ಗಂಟೆಗೆ ಎಲ್ಲರೂ ಸುಸ್ತಾಗಿರುತ್ತಾರೆ, ನಾನು ಆ ಅರ್ಥದಲ್ಲಿ ಹೇಳಿದೆ.

ಶ್ರೀ ಎಂ.ಸಿ. ನಾಣಯ್ಯ : ನನ್ನ ಮತ್ತು ವಾಟಾಳರ ಸಂಪರ್ಕ ಬಹಳ ವರ್ಷಗಳಿಂದ ಇದೆ. ನನ್ನ ಸಂಪರ್ಕವನ್ನು ಬೆಳೆಸಿದರೂ ಸಹ ಅವರು ಏತಕ್ಕೆ ಈ ತರಹ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದು ತಪ್ಪು. ಸಂಪರ್ಕ ಇದೆ ನಿಜ. ಆದರೆ ಅವರ ವ್ಯವಸ್ಥೆಗಳು ನನ್ನಲ್ಲಿ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಒಬ್ಬ ಸ್ವಾಮಿಗಳು ಊರಿನಲ್ಲಿದ್ದರು, ಊರಿನಲ್ಲಿ ಬಹಳ ಜನ ಸೇರಿದ್ದರು. ಅವರು ಪ್ರವಚನ ಮಾಡುವುದಕ್ಕಿಂತ ಮುಂಚೆ ನಾಣಯ್ಯನವರಂಥವರು ಹೋಗಿದ್ದರು. ಸ್ವಾಮಿಗಳು ಅವರನ್ನು ಕರೆದು ವಿನಪ್ಪಾ ಬಹಳ ಜನ ನಿನ್ನ ಬಗ್ಗೆ ಮಾತನಾಡುತ್ತಿದ್ದಾರೆ. ನಿನಗೆ ಕೆಟ್ಟ ಹೆಸರು ಬಂದಿದೆ. ನೀನು ಬಹಳ ಕುಡಿಯುತ್ತೀಯ ಎನ್ನುತ್ತಿದ್ದಾರೆ ಎಂದರು. ಅದಕ್ಕೆ ಅವರು ಹೋದ ಸಾರಿ ನಿಮ್ಮ ಜೊತೆಯಲ್ಲಿ ಕುಡಿದಾದ ಮೇಲೆ ನಾನು ಕುಡಿದೇ ಇಲ್ಲ ಎಂದರು. ಈ ಒಂದು ವಿಷಯವನ್ನು ಇನ್ನೊಂದು ಸಾರಿ ತೆಗೆದುಕೊಳ್ಳೋಣ.

(ನಗು)

ಅಧ್ಯಕ್ಷರು : ನಾಣಯ್ಯರವರ ಸಹವಾಸ ಅಂದ ತಕ್ಷಣ, ಇದರಿಂದ ಅವರ ಸಹವಾಸದಲ್ಲಿ ಬಿದ್ದಿದ್ದೇನೆ ಎಂಬ ರೀತಿಯಲ್ಲಿ ಎಂದು ಮಾನ್ಯ ಪಟೇಲರು ಹೇಳಿದರಲ್ಲಾ, ಇದು ನಿಜವಾಗಿ ಹಕ್ಕುಚ್ಯುತಿಯಾಗಿರುತ್ತದೆ. ಇದರ ಬಗ್ಗೆ ಹಕ್ಕುಚ್ಯುತಿಯನ್ನು ಪಟೇಲರ ಮೇಲೆ ಮಂಡಿಸಬೇಕಾಗುತ್ತದೆ. ಸ್ವಾಮಿಗಳ ಕಥೆ ಹೇಳಿ ದಾರಿ ತಪ್ಪಿಸಿ ನಾನು ಆ ಸಹವಾಸದಲ್ಲಿದ್ದೇನೆ. ಎಂಬ ಭಾವನೆ ಬರುವ ರೀತಿಯಲ್ಲಿ ಹೇಳಿದ್ದಾರೆ. ಅದು ನನ್ನ ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಸ್ನೇಹ ಬಹಳ ವರ್ಷಗಳಿಂದ ಇದೆ ಎಂದು ಹೇಳಿದೆ ಅಷ್ಟೇ. ನನಗೂ ಬೈರೇಗೌಡರಿಗೂ ಸ್ನೇಹ ಇದೆ. ನನಗೂ ನಂಜೇಗೌಡರಿಗೂ ಹಲವಾರು ವರ್ಷಗಳಿಂದ ಸ್ನೇಹ ಇದೆ. ...

ಶ್ರೀ ಹೆಚ್.ಎನ್. ನಂಜೇಗೌಡ : ಯಾವಾಗಲೂ ಒಂದು ದಿನ ಇರುತ್ತಾ ಇರಲಿಲ್ಲ ಅಷ್ಟೇ.

ಅಧ್ಯಕ್ಷರು : ನೋಡಿ, ನಿಮ್ಮ ಸಾಕ್ಷಿಗೆ ಯಾರೂ ಕೂಡ ಅಂತಹ ಒಳ್ಳೆಯವರಿಲ್ಲ. ಇಂತಹ ಸಾಕ್ಷಿಗಳನ್ನು ಅವಲಂಬಿಸಿ ಹೆಚ್ಚಿನ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿರುವ ಪ್ರಮೇಯ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಕಾಲ ಕೆಟ್ಟು ಹೋಗಿದೆ. ಯಾರು ಯಾರು ಕೈ ಕೊಡುತ್ತಾರೆ ಎಂಬುದು ಗೊತ್ತಿಲ್ಲ. ಅಧ್ಯಕ್ಷರೇ, ನೀವು ನಿಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನನಗೆ ನಂಬಿಕೆ ಇದೆ. ನೀವು ಅಂಥವರು ಅಲ್ಲ ಎಂದು. ಅದು ಬಿಡಿ. ಈಗ ಪ್ರಕಟಣೆ

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆಂದು ಮಾನ್ಯ ಸಭಾಧ್ಯಕ್ಷರು ಪ್ರಕಟಿಸಿದರು.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 31ನೇ ಮಾರ್ಚ್ 1995ರಂದು ಈ ಕೆಳಕಂಡ ವಿಧೇಯಕಗಳು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತೇನೆ.

1. ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, 1995.
2. ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ, 1995.